# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ : (1808)1595
ಸದಸ್ಯರ ಹೆಸರು : ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 23.03.2026
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

********

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಗರ್ಭಕಂಠ ಕ್ಯಾನ್ಸರ್ ಎಷ್ಟು ಜನರಿಗೆ ಕಂಡುಬಂದಿದೆ ಹಾಗೂ ಈ ರೋಗದಿಂದ ಎಷ್ಟು ಸಾವು ಸಂಭವಿಸಿದೆ; | ರಾಷ್ಟ್ರೀಯ ಅಸಾಂಕ್ರಾಮಿಕ ನಿಯಂತ್ರಣ ರೋಗಗಳ ಕಾರ್ಯಕ್ರಮದಡಿ ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಗರ್ಭಕಂಠ ಕ್ಯಾನ್ಸರ್ ಕಂಡುಬಂದಿರುವ ರೋಗಿಗಳ ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಜನ ಆಧಾರಿತ ಸರ್ವೆ, ಕಿದ್ವಾಯಿ ಆಸ್ಪತ್ರೆ, ಬೆಂಗಳೂರು ಇವರ ವರದಿಯ ಪ್ರಕಾರ, ಗರ್ಭಕಂಠದ ಕ್ಯಾನ್ಸರ್ ನಿಂದ ಮರಣ ಹೊಂದಿದವರ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ:<br><br>2023 ರಲ್ಲಿ -127<br>2024 ರಲ್ಲಿ -131<br>2025 ರಲ್ಲಿ -137 |
| (ಆ) | ಸದರಿ ರೋಗ ತಡೆಗಟ್ಟಲು ಕೇಂದ್ರ ಸರ್ಕಾರದ ಮಹತ್ವ ಯೋಜನೆಯಾದ "ಸ್ವಸ್ಥ ನಾರಿ" ಯೋಜನೆಯಡಿ ಹದಿಹರೆಯದ ಹೆಣ್ಣುಮಕ್ಕಳಿಗೆ ಉಚಿತವಾಗಿ HPV ಲಸಿಕೆ ಹಾಕಿಸುವ ಅಭಿಯಾನವು ರಾಜ್ಯದಲ್ಲಿ ಪೂರ್ಣವಾಗಿ ಅನುಷ್ಠಾನವಾಗಿದೆಯೇ; | ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ಉದ್ದೇಶದಿಂದ ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ - ಕಲ್ಯಾಣ ಸಚಿವಾಲಯವು ರಾಷ್ಟ್ರ ಮಟ್ಟದಲ್ಲಿ 28ನೇ ಫೆಬ್ರವರಿ 2026 ರಂದು 14 ವರ್ಷ ವಯಸ್ಸಿನ (14 ಪೂರ್ಣಗೊಂಡು 15 ಪೂರ್ಣವಾಗದ) ಹೆಣ್ಣುಮಕ್ಕಳಿಗೆ HPV ಲಸಿಕಾ ಅಭಿಯಾನವನ್ನು ಪ್ರಾರಂಭಿಸಿದ್ದು, ಅದೇ ದಿನದಂದು ಕರ್ನಾಟಕದಲ್ಲೂ HPV ಲಸಿಕೆ ನೀಡುವ ಮೂಲಕ ಪ್ರಾರಂಭಿಸಿ 3 ತಿಂಗಳ ಅಭಿಯಾನವನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ. |
| (ಇ) | ಈ ಅಭಿಯಾನವು ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಕೈಗೊಳ್ಳಲಾಗಿದೆ ಹಾಗೂ ಇಲ್ಲಿಯವರೆಗೆ ಎಷ್ಟು ಹೆಣ್ಣುಮಕ್ಕಳಿಗೆ ಉಚಿತವಾಗಿ ಈ ಲಸಿಕೆಯನ್ನು ನೀಡಲಾಗಿದೆ; ಒಂದು ಲಸಿಕೆಯ ಚುಚ್ಚುಮದ್ದಿಗೆ ಸರ್ಕಾರಕ್ಕೆ ತಗಲುವ ವೆಚ್ಚವೆಷ್ಟು? | ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಮಾರ್ಗಸೂಚಿಯಂತೆ ಕರ್ನಾಟಕ ರಾಜ್ಯಕ್ಕೆ 2.54 ಲಕ್ಷ ಡೋಸ್‌ಗಳು HPV ಲಸಿಕೆಯು ಉಚಿತವಾಗಿ ಸರಬರಾಜಾಗಿದ್ದು, ಎಲ್ಲಾ ಜಿಲ್ಲೆಗಳ ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ 3 ತಿಂಗಳ ಅವಧಿಯಲ್ಲಿ HPV ಲಸಿಕಾ ಅಭಿಯಾನವನ್ನು ಮಾರ್ಚ್ 2026 ರಿಂದ ಮೇ 2026 ರವರಗೆ ಹಮ್ಮಿಕೊಳ್ಳಲಾಗಿದೆ.<br>ಲಸಿಕೆಯ ಚುಚ್ಚುಮದ್ದಿನ ವೆಚ್ಚವು ರಾಜ್ಯ ಸರ್ಕಾರಕ್ಕೆ ಅನ್ವಯವಾಗುವುದಿಲ್ಲ. |

**ಸಂಖ್ಯೆ:ಆಕುಕ 64 ಎಸ್‌ಟಿಕ್ಯೂ 2026**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

| ಅನುಬಂಧ-1 | | | |
|---|---|---|---|
| ಗರ್ಭಕಂಠದ ಕ್ಯಾನ್ಸರ್‌ನ 3 ವರ್ಷಗಳ ಮಾಹಿತಿ | | | |
| **Sl No** | **ವರ್ಷಗಳು** | **Screened** | **Diagnosed** |
| 1 | ಏಪ್ರಿಲ್-2023-ಮಾರ್ಚ್-2024 | 19,19,486 | 1,648 |
| 2 | ಏಪ್ರಿಲ್-2024-ಮಾರ್ಚ್-2025 | 16,59,558 | 1,335 |
| 3 | ಏಪ್ರಿಲ್-2025-ಫೆಬ್ರವರಿ-2026 | 8,66,306 | 473 |

Director (RCH)